


ಆಯಿತು ಅದರ ಸಿಪ್ಪೆ ತಿರುಳು ಎಲ್ಲವೂ ವೆಟ್ಟೇ ಎನ್ನುತ್ತಾಳೆ. ಸಂಕ್ರಾಂತಿ ಮುಗಿದ ಕೆಲವು ದಿನಗಳ ನಂತರ ಸೋಮು ಮನೆಯಲ್ಲಿದ್ದ ಕಬ್ಬು ತಿಂದ. ಸೋಮುಗೆ ಕಬ್ಬು ತಿನ್ನುವುದೆಂದರೆ ಬಲು ಖುಷಿ.

ಅವತ್ತು ಸೋಮು ಕಬ್ಬಿನ ರಸ ಹೀರಿ ಸಿಪ್ಪೆಗಳನ್ನು ಡ್ರೈ ಕಸದ ಡಬ್ಬಿಗೆ ಹಾಕಿದ್ದ. ಸ್ವಲ್ಪ ಹೊತ್ತಾದ ಮೇಲೆ ಸೋಮಿ ಅದನ್ನು ನೋಡಿ ರೀ ಇದು ವೆಟ್ ಕಸಾರೀ ಇದನ್ಯಾಕೆ ಡ್ರೈ ಕಸಕ್ಕೆ ಹಾಕಿದ್ದೀರ ಅಂದಳು. ಸೋಮು ಲೇ, ಅದರಲ್ಲಿ ಒಂದೇ ಒಂದು ತೊಟ್ಟು ವೆಟ್ ತೋರಿಸಿಬಿಡು. ಹಾಗೆ ಹೀರಿದ್ದೀನಿ. ಅದು ಎಲ್ಲಾ ರೀತಿಯಲ್ಲೂ ಡ್ರೈ ಕಸವೇ ಅಂದ. ಇಬ್ಬರಿಗೂ ವಾಗ್ವಾದ Suರುವಾಯಿತು. ಸುಮ್ಮನಿರೆ ಯಾಕೆ ಕೂಗಾಡ್ತೀಯಾ ಅಂದು ಸೋಮು ಕಾರ್ಪೊರೇಷನ್ ಆಫೀಸಿಗೆ ಫೋನ್ ಮಾಡಿದ.

'ಹಲೋ ಕಾರ್ಪೊರೇಷನ್ ಆಫೀಸಾ?'



'ಹೌದು ನೀವ್ಯಾರು?'

'ನಾನು ಸೋಮು ಅಂತ. ವಾಲ್ಮೀಕಿ ಬಡಾವಣೆ ಎಂಟನೇ ಕ್ರಾಸು, ನಾಲ್ಕನೇ ಮೈನು ಮನೆ ನಂಬರು ಮುನ್ನೂರಾ ಅರವತ್ತೆಂಟು.'

'ಏನಾಗಬೇಕಿತ್ತು?'


'ಒಂದು ಮಾಹಿತಿ ಬೇಕಾಗಿತ್ತು ಸರ್, ಕಬ್ಬಿನ ಸಿಪ್ಪೆ ವೆಟ್ ಕಸಾನಾ ಡ್ರೈ ಕಸಾನಾ?'

'ಅದು ನಾವು ಹೇಳೋಕಾಗಲ್ಲ. ನೀವು ಈ ನಂಬರಿಗೆ ಫೋನ್ ಮಾಡಿ' ಅಂದರು.

ಮತ್ತೆ ಸೋಮು ಆ ನಂಬರಿಗೆ ಫೋನ್ ಮಾಡಿದ.

'ಏನ್ರೀ ಗೋಳು ನಿಮ್ದು' ಅಂತಾನೇ ಕಾಲ್ ಸ್ವೀಕರಿಸಿದರು.

'ನನ್ನದಲ್ಲ ಸರ್ ಗೋಳು ನನ್ನ ಹೆಂಡ್ತಿ ಸೋಮಿದು'



'ಮತ್ತೆ ಅವರೇ ಫೋನ್ ಮಾಡ್ಲಿ ಬಿಡ್ರಿ' ಅಂದು ಕರೆ ಕತ್ತರಿಸಿದರು. ಸೋಮು ಮತ್ತೆ ಫೋನ್ ಮಾಡಿದ. ಈ ಸಾರಿ ಇನ್ನೊಬ್ಬರು ಫೋನ್ ತಗೊಂಡ್ರು.

'ಸರ್ ಕಬ್ಬಿನ ಸಿಪ್ಪೆ ವೆಟ್ ಕಸಾನಾ, ಡ್ರೈ ಕಸಾನಾ' ಅಂತ ಕೇಳಿದ.

'ರೀ ಸ್ವಾಮಿ ಕಬ್ಬಿನ ಹಾಲು ಕುಡೀಬೇಕು ಅಂದ್ರೆ ಅಂಗಡಿಗೆ ಹೋಗಿ ಇಪ್ಪತ್ತು ರೂಪಾಯಿ ಬಿಸಾಕಿ ಒಂದು ಲೋಟ ಕಬ್ಬಿನ ರಸ ಕುಡಿದು ಮನೆಗೆ ಹೋಗ್ರೀ. ಈ ಪಂಚಾಯಿತಿ ಎಲ್ಲ ನಿಮಗೆ ಯಾಕ್ರೀ?'

'ಹಲೋ ಸರ್, ನಾಗರಿಕರ ಅನುಮಾನ ಪರಿಹಾರ ಮಾಡಬೇಕಾದ್ದು ನಿಮ್ಮ ಕರ್ತವ್ಯ. ನೀವು ಹೇಳಿದ ಹಾಗೆ ಅಂಗಡಿಗೆ ಹೋಗಿ ಕಬ್ಬಿನ ಹಾಲು ಕುಡಿದರೆ ಕಸ ಎಲ್ರೀ ಬರುತ್ತೇ? ಎಂಥಾ ಮಾತಾಡ್ತೀರ ರೀ, ಸ್ವಲ್ಪ ಹೊತ್ತಾದ ಮೇಲೆ ಬರಲ್ವೇನ್ರೀ?' ಅಂದು ನಕ್ಕರು.

ಅವರು ನಕ್ಕಿದ್ದು ಸೋಮುಗೆ ಅವಮಾನವಾದಂತಾಯಿತು.

'ಸರ್. ನೋ ಜೋಕ್ಸ್ ಪ್ಲೀಸ್, ನಮ್ಮ ಮನೆಗೆ ಸಂಕ್ರಾಂತಿ ಹಬ್ಬಕ್ಕೆ ತಂದಿದ್ದ ಕಬ್ಬು ಉಳಿದಿತ್ತು. ನನಗೆ ಕಬ್ಬು ಸಿಗಿದುಕೊಂಡು ರಸ ಹೀರೊ ಆಸೆ. ಹಾಗೆ ಮಾಡಿದ ಮೇಲೆ ನನ್ನ ಹೆಂಡ್ತಿ ಕಬ್ಬಿನ ಸಿಪ್ಪೆನ ವೆಟ್ ಕಸಕ್ಕೆ ಹಾಕಿ ಅಂತಿದಾಳೆ. ರಸ ಹೀರಿದ ಕಬ್ಬಿನ ಸಿಪ್ಪೆ ಡ್ರೈ ಕಸ ಅಲ್ವಾ ಸರ್'.

'ಅದು ಹ್ಯಾಗ್ರೀ ಡ್ರೈ ಕಸ ಆಗುತ್ತೆ. ಅದು ವೆಟ್ ಕಸಾನೇ ರೀ. ಈಗ ನಿಮ್ಮ ಮನೇಲಿ ತೆಂಗಿನಕಾಯಿ ತುರಿಯೋದು ಯಾರು?'

'ಅದು ನಮ್ಮನೆ ಸೀಕ್ರೆಟ್ ಸರ್, ಅದನ್ನೆಲ್ಲಾ ನೀವು ಕೇಳಲೂ ಬಾರದು ನಾನು ಹೇಳಲೂ ಬಾರದು.'

'ಇರ್ಲಿ ಹೇಳ್ರೀ, ನಾನು ಯಾರಿಗೂ ಹೇಳಲ್ಲ.'

'ಹಾಗಂದರೆ ನನಗೆ ಧೈರ್ಯ, ಮದುವೆಯಾದಾಗಿನಿಂದ ನಾನೇ ತುರಿತಿರೋದು